## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 44/ 2017**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀಮತಿ ಸುಮಿತ್ರಾ | ಪ್ರಾಸಾಃ 05 |
| ಗಂಡ/ಹೆಸರುಃ | ವೆಂಕಟೇಶ @ ವೆಂಕಟಪ್ಪ | ಚಾಸಾಃ 01 |
| ವಯಸ್ಸುಃ | 33 ವರ್ಷ | ದಿಃ 19-06-2024 |
| ಉದ್ಯೋಗಃ | ಗೃಹಿಣಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಮಾನಸಗಲ್ ಗ್ರಾಮ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಚಾಸಾಃ 6 ಮತ್ತು 7 ರವರು ನನ್ನ ತಂದೆ-ತಾಯಿ ಆಗುತ್ತಾರೆ. ಚಾಸಾಃ 8 ರವರು ನನ್ನ ತಮ್ಮ ಆಗಿರುತ್ತಾರೆ. ಚಾಸಾಃ 9 ನನ್ನ ಭಾವ, ಚಾಸಾಃ 10 ರವರು ನನ್ನ ಚಿಕ್ಕಪ್ಪ, ಚಾಸಾಃ 11 ನನ್ನ ಅಕ್ಕ ಆಗಿರುತ್ತಾರೆ. ಚಾಸಾಃ 12 ರಿಂದ 16, 20, 24, 25, 26 ರವರ ಪರಿಚಯ ಇದೆ. ಚಾಸಾಃ 37 ರವರು ನಮ್ಮ ಮದುವೆ ಮಾಡಿಸಿದ ಪುರೋಹಿತರು ಇರಬಹುದು.

2. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ನನ್ನ ಗಂಡ ಆಗಿರುತ್ತಾರೆ. 2 ನೇ ಆರೋಪಿ ನನ್ನ ಅತ್ತೆ ಹಾಗೂ 3 ನೇ ಆರೋಪಿ 1 ನೇ ಆರೋಪಿಯ 2 ನೇ ಹೆಂಡತಿ ಆಗಿರುತ್ತಾರೆ.

3. ನನ್ನ ಹಾಗೂ 1 ನೇ ಆರೋಪಿಯ ಮದುವೆ ಡಿಸೆಂಬರ್ 2012 ರಲ್ಲಿ ಆಗಿರುತ್ತದೆ. ನಾಲ್ಕು ತಿಂಗಳು ಬಳಿಕ ನಾನು 1 ನೇ ಆರೋಪಿಯೊಂದಿಗೆ ವೈವಾಹಿಕ ಜೀವನ ನಡೆಸಿದ್ದು , ಆಗ ನಾನು ಗರ್ಭಿಯಾಗಿದ್ದಾಗ 1 ನೇ ಆರೋಪಿಯು ನಮಗೆ ಮಗು ಬೇಡ ಎಂದು ಹೇಳಿ ನನಗೆ ಮಾತ್ರೆ ತೆಗೆದುಕೊಳ್ಳುವಂತೆ ಹೇಳಿದ್ದರಿಂದ ನನಗೆ ಗರ್ಭಪಾತ ಆಗಿರುತ್ತದೆ. ನಾನು 2 ನೇ ಬಾರಿ ಗರ್ಭಿಣಿಯಾದಾಗ ಐದು ತಿಂಗಳ ನಂತರ 1 ನೇ ಆರೋಪಿಗೆ ತಿಳಿಸಿರುತ್ತೇನೆ. ಮದುವೆಯಾದ 4-5 ತಿಂಗಳ ನಂತರ ಆರೋಪಿ ನನ್ನನ್ನು ಮದುವೆಯಾಗುವ ಬದಲು ಸುಶ್ಮ ಎನ್ನುವ ಒಬ್ಬ ಶಿಕ್ಷಕಿಯೊಂದಿಗೆ ಮದುವೆ ಮಾಡಿಕೊಂಡು ವಿಚ್ಛೇದರ ಮಾಡಿಕೊಂಡಿದ್ದರು

ಎಂಬ ವಿಷಯ ಗೊತ್ತಾಗಿರುತ್ತದೆ. ನಾನು ಈ ಬಗ್ಗೆ 1 ನೇ ಆರೋಪಿಯನ್ನು ವಿಚಾರಿಸಿದಾಗ ಆತ ನಾನು 100 ಮದುವೆ ಬೇಕಾದರೂ ಮಾಡಿಕೊಳುಳ್ಳುತ್ತೇನೆ ಕೇಳಲು ನೀನ್ಯಾರು ಎಂದು ಹೇಳಿರುತ್ತಾರೆ. ನಾನು ತವರು ಮನೆಗೆ ಹೆರಿಗೆಗೆ ಹೋಗಿ ಹೆರಿಗೆ ಆದ ನಂತರ 1 ನೇ ಆರೋಪಿ ನನಗೆ ನೀನು ನನಗೆ ಮೊದಲೇ ಇಷ್ಟ ಇಲ್ಲ ಹಾಗೂ ಹೆಣ್ಣು ಮಗು ಹೆತ್ತಿರುತ್ತೀಯಾ ಆದ್ದರಿಂದ ನಮ್ಮಮನೆಗೆ ಬರುವುದೇ ಬೇಡಾ ಎಂದು ಹೇಳಿರುತ್ತಾರೆ. ಆ ನಂತರ ನಾಲ್ಕು ತಿಂಗಳ ಬಳಿಕ ನಾನು ನನ್ನ ತಂದೆಯನ್ನು ಕರೆದುಕೊಂಡು ಗಂಡನ ಮನೆಗೆ ಹೋಗಿದ್ದೆನು. ಆಗ 1 ಮತ್ತು 2 ನೇ ಆರೋಪಿತರು ದುಡ್ಡು ತೆಗೆದುಕೊಂಡು ಬರುವುದಾದರೆ ಮಾತ್ರ ಮನೆಗೆ ಬಾ, ಇಲ್ಲವಾದರೆ ನಿನ್ನ ತಂದೆಯೊಂದಿಗೆ ಹೋಗು ಎಂದು ತಿಳಿಸಿರುತ್ತಾರೆ. ಆದರೂ ಸಹ ನಾನು ಗಂಡನ ಮನೆಯಲ್ಲಿಯೇ ಉಳಿದುಕೊಂಡಿದ್ದು, 1 ನೇ ಆರೋಪಿ ಚಿತ್ತಾಪೂರದಲ್ಲಿಯೇ ಮನೆ ಮಾಡಿಕೊಂಡು ವಾಸಿಸಲು ಪ್ರಾರಂಭಿಸಿದ್ದು, ವಾರಕ್ಕೆ ಒಂದೆರಡು ಸಲ ಮನೆಗೆ ಬರುತ್ತಿದ್ದರು. 1 ನೇ ಆರೋಪಿ ನನಗೆ ಕಟ್ಟಿಗೆಯಿಂದ ಮತ್ತು ಬೆಲ್ಟನಿಂದ ಹೊಡೆಯುತ್ತಿದ್ದರು. ಅಲ್ಲದೇ ನನಗೆ ಸೂಳೆ, ಬೊಸಡಿ ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಅದಕ್ಕೆ 2 ನೇ ಆರೋಪಿಯು ಸಹ ಪ್ರೇರಣೆ ನೀಡಿ ಹೆಂಡತಿಯನ್ನು ಹದ್ದು-ಬಸ್ತಿನಲ್ಲಿ ಇಟ್ಟುಕೊಳ್ಳಬೇಕು ಎಂದು ಹೇಳುತ್ತಿದ್ದರು. ಅವರೂ ಸಹ ನನಗೆ ಕೆಟ್ಟ ಶಬ್ದಗಳಿಂದ ಬೈಯುತ್ತಿದ್ದರು. 1 ಮತ್ತು 2 ನೇ ಆರೋಪಿತರು ನನಗೆ ದುಡ್ಡು ತರದಿದ್ದರೆ ನಿಮ್ಮ ಮನಗೆ ಹೋಗು ಎಂದ ಹೇಳಿ ಹೊಡೆಯುತ್ತಿದ್ದರು.

4. ನಾನು ಜಾತ್ರೆ ನಮ್ಮ ಊರಿಗೆ ಹೋದಾಗ 1 ನೇ ಆರೋಪಿ 3 ನೇ ಆರೋಪಿಯೊಂದಿಗೆ 2 ನೇ ಮದುವೆ ಮಾಡಿಕೊಂಡು ಮನೆಗೆ ಕರೆದುಕೊಂಡು ಬಂದಿರುತ್ತಾರೆ ಎಂಬುದಾಗಿ 1 ಮತ್ತು 2 ನೇ ಆರೋಪಿತರ ಮನೆಯ ಪಕ್ಕದವರು ನನಗೆ ಫೋನ್ ಕರೆ ಮಾಡಿ ತಿಳಿಸಿರುತ್ತಾರೆ. ನಾನು ಆಗ ನನ್ನ ತಂದೆಯೊಂದಿಗೆ ಗಂಡನ ಮನೆಗೆ ಹೋಗಿ ಅಲ್ಲಿದ್ದ 3 ನೇ ಆರೋಪಿಗೆ 1 ನೇ ಅರೋಪಿ ನನ್ನ ಗಂಡ ಆಗಿರುತ್ತಾನೆ ಎಂದು ಹೇಳಿದಾಗ ತಾವು 1 ನೇ ಆರೋಪಿಯ ಹೆಂಡತಿ ಇರುವುದಾಗಿ ತಿಳಿಸಿರುತ್ತಾರೆ. ಅಲ್ಲದೇ 1 ಮತ್ತು 3 ನೇ ಆರೋಪಿತರು ನನಗೆ ಹೊಡಿ-ಬಡಿ ಮಾಡುವುದಾಗಿ ಬೆದರಿಕೆ ಹಾಕಿದ್ದರಿಂದ ನಾನು ನನ್ನ ತಂದೆಯೊಂದಿಗೆ

ತವರು ಮನೆಗೆ ಹೋಗಿರುತ್ತೇನೆ. ನಾವು 2-3 ತಿಂಗಳ ವರೆಗೆ ಹಿರಿಯರ ಮೂಲಕ ಬಗೆಹರಿಸಲು ಪ್ರಯತ್ನಿಸಿದರೂ ಸಹ ಆರೋಪಿತರು ಸ್ಪಂದಿಸದ ಕಾರಣ ನಂತರ ಗುರುಮಠಕಲ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

5. ಒಂದು ತಿಂಗಳ ನಂತರ ಪೋಲಿಸರು ನನ್ನ ಸಮಕ್ಷಮ ನನ್ನ ಗಂಡನ ಮನೆಯಲ್ಲಿ ಪಂಚನಾಮೆ ಮಾಡಿ ಪೋಟೋ ತೆಗೆದುಕೊಂಡಿದ್ದರು.

6. ಸಾಕ್ಷಿಯು ದೂರಿನಲ್ಲಿ ಇರುವ ತಮ್ಮ ಸಹಿಯನ್ನು ಈಗ ನೋಡಿ ಗುರುತಿಸಿದ್ದು, ದೂರನ್ನು ನಿಪಿ-5, ಸಾಕ್ಷಿಯ ಸಹಿ ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-1 ರ ಪಂಚನಾಮೆಯಲ್ಲಿನ ಮೊದಲ ಪುಟದಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಇರುವ ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದು ನನ್ನ ಸಹಿ ಅಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಈಗ ವಿವಾಹ ಆಮಂತ್ರಣ ಪತ್ರಿಕೆ ಹಾಗೂ ಮದುವೆ ಸಮಯದಲ್ಲಿ ತೆಗೆದ ನಾಲ್ಕು ಪೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-6 ರಿಂದ 10 ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದಃ</u>**

ನಾವು ಮದುವೆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಿಗೆ 25 ಗ್ರಾಮ ಬಂಗಾರ ಹಾಗೂ ರೂ.2,50,000/- ಲಕ್ಷ ಹಣ ವರದಕ್ಷಣೆ ನೀಡಿದ್ದೆವು ಎಂದರೆ ಸರಿ. ದಿನಾಂಕ 10.06.2016 ರಂದು ನಾನು ಗಂಡನ ಮನೆಗೆ ಹೋದಾಗ 1 ರಿಂದ 3 ನೇ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಹೊಡೆದು ಹಾಗೂ ಜೀವ ಬೆದರಿಕೆಯನ್ನು ಹಾಕಿದ್ದರು ಎಂದರೆ ಸರಿ. ಪೋಲಿಸರು ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ನಾನು ಅವರಿಗೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಂ.ಬಿ.ಪಿ ವಕೀಲರಿಂದಃ</u>**

ನನ್ನ ತಂದೆ-ತಾಯಿ ಮಾನಸಗಲ್ ಗ್ರಾಮದಲ್ಲಿ ವಾಸವಾಗಿದ್ದಾರೆ. ಚಾಸಾಃ8 ನನ್ನ ತಮ್ಮ ಹಾಗೂ ಚಾಸಾಃ 9 ಮತ್ತು 10 ರವರು ಸಹ ಮಾನಸಗಲ್ ಗ್ರಾಮದಲ್ಲಿ ವಾಸವಾಗಿದ್ದಾರೆ. ನನ್ನ ಅಕ್ಕ ಚಾಸಾಃ 11 ರವರು ಸಹ ಮಾನಸಗಲ್ ಗ್ರಾಮದಲ್ಲಿ ವಾಸವಾಗಿದ್ದಾರೆ. ಚಾಸಾಃ 12 ರಿಂದ 14 ರವರು ಮಾನಸಗಲ್ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನನ್ನ ತಂದೆಗೆ ನಾವು ಒಟ್ಟು 05 ಜನ ಮಕ್ಕಳು ಇದ್ದೇವೆ. ನನ್ನ ತಮ್ಮ ಒಬ್ಬನಿಗೆ ಮಾತ್ರ ಇನ್ನು ಮದುವೆಯಾಗಿಲ್ಲ. ನಾನು ದೇವದುರ್ಗದಲ್ಲಿ ವಿಧ್ಯಾಭ್ಯಾಸ ಮಾಡಿದ್ದೇನೆ. ನಾನು ಪದವಿ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 1 ನೇ ತರಗತಿಯಿಂದ 5 ನೇ ತರಗತಿಯವರೆಗೆ ನಮ್ಮ ಗ್ರಾಮದಲ್ಲಿ, ಪೌಢ ಶಾಲಾ ವಿದ್ಯಾಭ್ಯಾಸವನ್ನು ಎಮನೂರು ಗ್ರಾಮದಲ್ಲಿ, ಪಿ.ಯು.ಸಿ ಮತ್ತು ಡಿ.ಎಡ್ ದೇವದುರ್ಗದಲಿಲ ಹಾಗೂ ಪದವಿ ವಿದ್ಯಭ್ಯಾಸವನ್ನು ಯಾದಗಿರಿಯಲ್ಲಿ ಮುಗಿಸಿರುತ್ತೇನೆ. ಎಮನೂರು ಗ್ರಾಮದಿಂದ ಮಾನಸಗಲ್ ಗ್ರಾಮ ಸುಮಾರು 03 ಕಿ.ಮೀ ದೂರ ಇರಬಹುದು. ನಾನು ವಿದ್ಯಾಭ್ಯಾಸ ಮಾಡಲು ನಮ್ಮ ಊರಿನಿಂದ ಪ್ರತಿದಿನ ಎಮನೂರು ಗ್ರಾಮಕ್ಕೆ ಹೋಗಿ ಬರುತ್ತಿದ್ದೆನು. ಮಾನಸಗಲ್ ಗ್ರಾಮದಿಂದ ದೇವದುರ್ಗ ಸುಮಾರು 12-15 ಕಿ.ಮೀ ದೂರ ಇದೆ. ನಾನು ಪಿ.ಯು.ಸಿ ಮತ್ತು ಡಿ.ಎಡ್ ವಿದ್ಯಾಭ್ಯಾಸವನ್ನು ದೇವದುರ್ಗ ದಲ್ಲಿಯೇ ಹಾಸ್ಟಲ್ ನಲ್ಲಿ ಇದ್ದು ಮುಗಿಸಿರುತ್ತೇನೆ. ನಾನು 2013 ರಿಂದ 2019 ರ ಅವರದಿಯಲ್ಲಿ ಯಾದಗಿರಿಯ ನ್ಯೂ ಕನ್ನಡ ಕಾಲೇಜಿನಲ್ಲಿ ಪದವಿ ವಿದ್ಯಾಭ್ಯಾಸ ಮಾಡಿದ್ದೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯವನ್ನು ನೀಡಲಾಗಿದೆ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**